## 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಬೀದರ ಪೀಠ ಬಸವಕಲ್ಯಾಣ

## SC. No.5018/2023
## SC. No.5043/2023

| | | |
|---|---|---|
| ಹೆಸರು | : | ಗೌರೀಶ |
| ತಂದೆಯ ಹೆಸರು | : | ಶಂಕರರಾವ ಸಾತಖೇಡ |
| ವಯಸ್ಸು | : | 35 ವರ್ಷ. |
| ಉದ್ಯೋಗ | : | ಒಕ್ಕಲೂತನ |
| ವಾಸಸ್ಥಳ | : | ಢೋರ ಜಮಗಾ |

**ಚಾ.ಸಾ.10**
**ಅ.ಸಾ. 07**

ಸಾಕ್ಷಿಯನ್ನು ಪ್ರಮಾಣಿಕರಿಸಲಾಯಿತು.

**ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರವರಿಂದ:-**

ನನಗೆ ಆರೋಪಿತರ ಪರಿಚಯವಿದೆ. ನನಗೆ ಚಾ.ಸಾ.1, 7, 8 ಮತ್ತು 9 ರಿಂದ 14 ರವರ ಪರಿಚಯವಿದೆ. ಮೃತ ಸಂಜನಾ ನನ್ನ ಸಂಬಂಧಿಕಳಿದ್ದು, ಆಕೆ ಸುಮಾರು 2 ವರ್ಷಗಳ ಹಿಂದೆ ಮೃತಪಟ್ಟಿರುತ್ತಾಳೆ. ಆಕೆ ಯಾವ ಕಾರಣಕ್ಕೆ ಮೃತಪಟ್ಟಿರುತ್ತಾಳೆ ಎಂದು ನನಗೆ ಗೊತ್ತಿಲ್ಲಾ. ನಾನು ಯಾರ ಮುಂದೆಯೂ ಯಾವುದೇ ಹೇಳಿಕೆ ನೀಡಿರುವುದಿಲ್ಲಾ.

***(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ ಆದಕಾರಣ ಅನುಮತಿ ನೀಡಲಾಯಿತು)***

**ಪಾಟಿ ಸವಾಲು - ಸರಕಾರಿ ಅಭಿಯೋಜಕರವರಿಂದಃ-**

ದಿ: 19.12.2022 ರಂದು ನಾನು ಚಾ.ಸಾ. 22 ರವರ ಮುಂದೆ ದಿ: 31.07.2021 ರಂದು ಮೃತ ಸಂಜನಾ ಈಕೆ 3 ನೇ ಆರೋಪಿತನೊಂದಿಗೆ ಮದುವೆ ಮಾಡಿಕೊಂಡು ನೊಂದಣಿ ಮಾಡಿಸಿದ್ದು ನಂತರ ಆರೋಪಿತರ ಮನೆಯಲ್ಲಿ ವಾಸವಾಗಿದ್ದಳು, ಆ ಸಮಯದಲ್ಲಿ ಆರೋಪಿತರೆಲ್ಲರೂ ಆಕೆಗೆ ವಿನಾ ಕಾರಣ ಜಗಳ ತೆಗೆದು ಮಾನಸಿಕ ಮತ್ತು ದೈಹಿಕ ಕಿರುಕುಳ ನೀಡುತ್ತಿದ್ದರು ಅಂತಾ ನನಗೆ ನಮ್ಮ ಗ್ರಾಮಕ್ಕೆ ಬಂದಾಗ ತಿಳಿಸಿದರು ಅಂತಾ ಅನ್ನುವುದು ಸರಿ ಅಲ್ಲಾ. ದಿ: 30.11.2022 ರಂದು ಚಾ.ಸಾ. 7 ರವರ ತಾಯಿ ತೀರಿಕೊಂಡಿದ್ದರಿಂದ ನಾನು ಅಂತ್ಯಕ್ರಿಯೆ ಕುರಿತು ಹೋಗಿದ್ದೆನು, ರಾತ್ರಿ 8:00 ಗಂಟೆ ಸುಮಾರಿಗೆ ಮೃತ ಸಂಜನಾ ಈಕೆ ಮರಳಿ ತಮ್ಮ ಗ್ರಾಮಕ್ಕೆ ಹೋದಾಗ ಸಂಜೆ 5:30 ಗಂಟೆಗೆ ಆರೋಪಿತರೆಲ್ಲರೂ ಸೇರಿ ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ ಏ ರಂಡಿ ನೀನು ಯಾರಿಗೆ ಕೇಳಿ ನಿಮ್ಮ ಅಜ್ಜಿಯ ಅಂತ್ಯಕ್ರಿಯಕ್ಕೆ ಹೋಗಿದ್ದಿ ಅಂತಾ ಬೈಯ್ದು ಆಕೆಯೊಂದಿಗೆ ಝಿಂಜಾ ಮುಷ್ಠಿ ಮಾಡಿ ರಂಡಿ ನೀನು ಎಲ್ಲಾದರೂ ಹೋಗಿ ಸಾಯಿ ಅಂತಾ ಬೈಯ್ದು, 2 ನೇ ಆರೋಪಿ ಇವಳಿಗೆ ಒಂದು ಗತಿ ಕಾಣಿಸೋಣ ಅಂತಾ ಹೇಳಿ ಮೂರು ಜನ ಆರೋಪಿತರು ಕೂಡಿಕೊಂಡು ಮನೆಯಲ್ಲಿದ್ದ ಸ್ಯಾನಿಟೈಜರ್ ಬಾಟಲ್ ತೆಗೆದುಕೊಂಡು ಸಂಜನಾಳ ಮೈ ಮೇಲೆ ಸುರಿದು ಬೆಂಕಿ ಹಚ್ಚಿರುತ್ತಾರೆ ಅಂತಾ ತಿಳಿದು ಬಂತು ಅಂತಾ ಅನ್ನುವುದು ಸರಿ ಅಲ್ಲಾ. ನಂತರ ದಿ: 19.12.2022 ರಂದು ಬೆಳಗಿನ ಜಾವ 2:00 ಗಂಟೆಗೆ ಕಲಬುರಗಿಯ ಬಸವೇಶ್ವ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಸಂಜನಾ ಮೃತಪಟ್ಟಿರುತ್ತಾಳೆ ಅಂತಾ ಗೊತ್ತಾಯಿತು ಅಂತಾ ಅನ್ನುವುದು ಸರಿ ಅಲ್ಲಾ. ಈಗ ಓದಿ ಹೇಳಿದಂತೆ ನಾನು ಚಾ.ಸಾ. 22 ರವರ

ಮುಂದೆ ಹೇಳಿಕೆ ನೀಡಿರುತ್ತೇನೆ ಅಂತಾ ಅನ್ನುವುದು ಸರಿ ಅಲ್ಲಾ. ಸಾಕ್ಷಿಯ ಹೇಳಿಕೆಯನ್ನು ನಿಶಾನೆ ಪಿ. 7 ಅಂತಾ ಗುರುತಿಸಲಾಯಿತು.

ನಾನು ನಿಶಾನೆ ಪಿ. 7 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಇಲ್ಲಾ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ :-**

ಪಾಟೀ ಸವಾಲು ಇಲ್ಲಾ.

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)***

ಓ. ಹೇ. ಕೇ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಸವಕಲ್ಯಾಣ. ಜಿಃ ಬೀದರ .